# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1071 (1285) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13 /03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ರಿಂದ 2022-23ರವರೆಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವಿವಿಧ ವಿಭಾಗಗಳಿಂದ ಡಿ.ಡಿ/ಚೆಕ್ ಗಳ ಮೂಲಕ ರೂ. 11.91 ಕೋಟಿ ರೂ.ಗಳ ಕಾರ್ಮಿಕ ಉಪಕರವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಲಾಗಿರುತ್ತದೆ ಎಂದು ತಿಳಿಸಿರುವ ಮೇರೆಗೆ ಪರಿಶೀಲಿಸಿದಾಗ, ಸದರಿ ಮೊತ್ತ ಬ್ಯಾಂಕ್ ಖಾತೆ ಪತ್ತೆಯಾಗಿರುವುದಿಲ್ಲ ಎಂದು ಸಿ.ಎ.ಜಿ ವರದಿ ಬಹಿರಂಗ ಪಡಿಸಿದ್ದು ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | 2021-22 ರಿಂದ 2022-23ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಏಪ್ರೀಲ್ 2021ಕ್ಕಿಂತ ಮೊದಲು ಸಂಗ್ರಹಿಸಲಾದ ಕಾರ್ಮಿಕ ಉಪಕರ 6.06 ಕೋಟಿ ರೂಗಳನ್ನು ಮಂಡಳಿಗೆ ಪಾವತಿಸದೇ ಉಳಿಸಿಕೊಂಡಿದ್ದು, ಗಮನಾರ್ಹ ವಿಷಯವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿರುವುದು ನಿಜವೇ; | ಹೌದು. |
| ಇ) | ಇದ್ದಲ್ಲಿ ಇಷ್ಟೊಂದು ಇಲಾಖೆ/ ಸಂಸ್ಥೆಗಳಿಂದ ಕಾರ್ಮಿಕ ಉಪಕರಗಳು ಬಾಕಿ ಉಳಿದಿದ್ದು, ಅಧಿಕಾರಿಗಳು ಈ ಕುರಿತು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೇ; ಈಗ ಸರ್ಕಾರ ಈ ವಿಷಯದಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ. | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ರೂ.11.91 ಕೋಟಿಗಳ ಮೊತ್ತವನ್ನು ಸುಂಕವಾಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರು ಪಾವತಿಸಿರುವುದಾಗಿ ಮಹಾಲೇಖಪಾಲರ ಲೆಕ್ಕಪರಿಶೋಧನೆಯಲ್ಲಿ ನಮೂದಿಸಿದ್ದು, ಈ ಪೈಕಿ ಮಂಡಳಿಯ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಚೆಕ್/ಡಿಡಿ/ನೆಫ್ಟ್/ಆರ್.ಟಿ.ಜಿ.ಎಸ್/ ಖಜಾನೆ ಮೂಲಕ ರೂ.9.85 ಕೋಟಿಯಷ್ಟು ಮೊತ್ತವನ್ನು ತಾಳೆ ಮಾಡಿ ಗುರುತಿಸಲಾಗಿರುತ್ತದೆ. ಬಾಕಿ ಉಳಿದ ರೂ.1.99 ಕೋಟಿಗಳ ಲೆಕ್ಕ ಸಮನ್ವಯವು ಪ್ರಗತಿಯಲ್ಲಿದ್ದು, ಈ ಸಂಬಂಧ ಅಗತ್ಯ ದಾಖಲೆಗಳನ್ನು |

ಒದಗಿಸುವಂತೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪತ್ರದ ಮುಖೇನ ಕೋರಲಾಗಿರುತ್ತದೆ.

2021-22 ರಿಂದ 2022-23ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಏಪ್ರಿಲ್ 2021 ಕ್ಕಿಂತ ಮೊದಲು ಸಂಗ್ರಹಿಸಲಾದ ಕಾರ್ಮಿಕ ಉಪಕರ (ಸುಂಕ) ರೂ.6.06 ಕೋಟಿಗಳನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ವಿಷಯದ ಬಗ್ಗೆ ಮಂಡಳಿಯಿಂದ ಸದರಿ ಮೊತ್ತ ಹಾಗೂ ಇಲ್ಲಿಯವರೆಗೆ ಜಮೆ ಮಾಡದೇ ಬಾಕಿ ಉಳಿಸಿಕೊಂಡಿರುವ ಸುಂಕದ ಮೊತ್ತವನ್ನು ಪಾವತಿಸಲು ಸದರಿ ಸಂಸ್ಥೆಯವರಿಗೆ ಈ ಮಂಡಳಿಯಿಂದ 07 ಪತ್ರಗಳು, 02 ಅರೆ ಸರ್ಕಾರಿ ಪತ್ರಗಳು ಹಾಗೂ ಸರ್ಕಾರದ ವತಿಯಿಂದ 02 ಪತ್ರಗಳಲ್ಲಿ ಕೋರಲಾಗಿದೆ.

ಇದರನ್ವಯ, ಸದರಿ ಸಂಸ್ಥೆಯವರು ನಿಧಿಯ ಕೊರತೆಯಿದ್ದು, ಸರ್ಕಾರದಿಂದ ಆರ್ಥಿಕ ಸಹಾಯ ನಿರೀಕ್ಷಿಸುತ್ತಿದ್ದು, ಅದು ಬಂದ ಕೂಡಲೇ ಪಾವತಿಸುವುದಾಗಿ ತಿಳಿಸಿದ್ದರು. ಅದಲ್ಲದೆ, ವಿನಾಯಿತಿ ನೀಡಲು ಸಹ ಕೋರಿದ್ದರು. ಆದರೆ, ವಿನಾಯಿತಿ ನೀಡಲು ಬರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಅದಲ್ಲದೇ, ಈ ಹಿಂದೆ ಮಂಡಳಿಯ ಅಧಿಕಾರಿಗಳು ಸದರಿ ಸಂಸ್ಥೆಗೆ ಹಲವಾರು ಬಾರಿ ಭೇಟಿ ನೀಡಿ, ಮೌಖಿಕವಾಗಿ ಸದರಿ ಮೊತ್ತ ಪಾವತಿಸಲು ಅಲ್ಲಿನ ಅಧಿಕಾರಿಗಳಿಗೆ ಕೋರಿರುತ್ತಾರೆ. ಆದರೆ, ನಿಧಿಯ ಕೊರತೆಯಿಂದಾಗಿ, ಸದರಿ ಮೊತ್ತ ಪಾವತಿಸಲು ಆಗುತ್ತಿಲ್ಲ, ಆರ್ಥಿಕ ಪರಿಸ್ಥಿತಿ ಸುಧಾರಿಸಿದಾಗ ಕೂಡಲೇ ಪಾವತಿಲಾಗುವುದೆಂದು ಸದರಿ ಸಂಸ್ಥೆಯ ಅಧಿಕಾರಿಗಳು ಮೌಖಿಕವಾಗಿ ತಿಳಿಸಿರುತ್ತಾರೆ.

ಮುಂದುವರೆದು, ಮಂಡಳಿಯ ಸುಂಕವನ್ನು ಸಂಗ್ರಹಿಸಿ-ವರ್ಗಾಯಿಸುವ ಎಲ್ಲಾ ಇಲಾಖೆ/ ಸಂಸ್ಥೆಗಳಿಗೆ ಬಾಕಿ ಉಳಿಸಿಕೊಂಡಿರುವ ಸುಂಕವನ್ನು ನಿರ್ದಿಷ್ಟ ಅವಧಿಯಲ್ಲಿ ಮಂಡಳಿಗೆ ಜಮೆಮಾಡುವ ಬಗ್ಗೆ ಕಾಲ-ಕಾಲಕ್ಕೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

ಅಂದರೆ, ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರಿಗೆ, ಜಿಲ್ಲಾಧಿಕಾರಿಗಳಿಗೆ, ಅಪರ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ನಗರಾಭಿವೃದ್ಧಿ ಇಲಾಖೆ ಅಧೀನದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ನಗರ ಸ್ಥಳೀಯ ಅಭಿವೃದ್ಧಿ ಪ್ರಾಧಿಕಾರಿಗಳು ಹಾಗೂ ಯೋಜನಾ ಪ್ರಾಧಿಕಾರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಅಧೀನ ಸಂಸ್ಥೆಗಳು ಮತ್ತು ಇತರೆ ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೆ

| | | |
|---|---|---|
| | | ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗುತ್ತಿದೆ.<br><br>ಅದಲ್ಲದೆ, ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿನ ವಿವಿಧ ಕಛೇರಿಗಳಿಲ್ಲಿ ಬಾಕಿ ಉಳಿಸಿಕೊಂಡಿರುವ ಸುಂಕದ ವಿವರವನ್ನು ಸಂಗ್ರಹಿಸಿ, ಮಂಡಳಿಗೆ ನೀಡಲು ನಿವೃತ ಅಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ.<br><br>ಮಂಡಳಿಯ ಸುಂಕವನ್ನು ಸಮರ್ಪಕವಾಗಿ ಸಂಗ್ರಹಿಸಲು ಮತ್ತು ಅಂದಾಜಿಸಲು ಹೊಸ ತಂತ್ರಾಂಶವನ್ನು ರೂಪಿಸುವ ಕಾರ್ಯ ಪ್ರಗತಿಯಲ್ಲಿದ್ದು, ಆ ಮುಖಾಂತರ ನಿಗದಿತ ಅವಧಿಯಲ್ಲಿ ಕಡಿತಗೊಳಿಸಿಕೊಂಡ ಸುಂಕದ ಮೊತ್ತವನ್ನು ಎಲ್ಲಾ ಇಲಾಖೆಗಳು/ಸಂಸ್ಥೆಗಳು ಮಂಡಳಿಗೆ ಪಾವತಿಸಲು ಸಾಧ್ಯವಾಗುವಂತೆ ಮಾಡಲಾಗುತ್ತಿದೆ. |

**ಕಾಇ 106 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**